# ಧರ್ಮ ಕಾರ್ಯದಿಂದ ಸುಖ-ಸಮೃದ್ಧಿ ಶಾಶ್ವತ: ಸ್ವರ್ಣವಲ್ಲೀ ಶ್ರೀ



**ಯಲ್ಲಾಪುರ: ಎಲ್.ಎಸ್.ಎಂ.ಪಿ ಸಂಕೀರ್ಣ ಉಧ್ಘಾಟಿಸಿ ಶ್ರೀಗಳು ಆಶೀರ್ವಚನ ನೀಡಿದರು.**

**ಯಲ್ಲಾಪುರ:** ಕೇವಲ ಹಣದಿಂದ ಸುಖವಿಲ್ಲ, ಧರ್ಮದಿಂದ ಸುಖವಿದೆ. ನಿತ್ಯ ಧರ್ಮಾನುಷ್ಠಾನ ಕಾರ್ಯದ ಮೂಲಕ ಬದುಕು ಸಾಗಬೇಕು. ಅಧರ್ಮದಿಂದ ಯಾವ ಗುರಿಯನ್ನೂ ತಲುಪಲು ಸಾಧ್ಯವಿಲ್ಲ. ಶಾಶ್ವತವಾಗಿ ಧರ್ಮದ ಕಾರ್ಯ,ಆಚರಣೆಯಿಂದ ಸುಖ ಸಮೃದ್ಧಿ ಸಿಗಲಿದೆ ಎಂದು ಸೋಂದಾ ಸ್ವರ್ಣವಲ್ಲಿಯ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ನುಡಿದರು.

ಶನಿವಾರ ಪಟ್ಟಣದಲ್ಲಿ ನೂತನವಾಗಿ ನಿರ್ಮಾಣಗೊಂಡ ಪ್ರಾಥಮಿಕ ಪತ್ತಿನ ವ್ಯವಸಾಯ ಸಹಕಾರಿ ಸಂಘದ ಎಲ್.ಎಸ್.ಎಂ.ಪಿ ಸಹಕಾರಿ ಸಂಕೀರ್ಣದ ಉಧ್ಘಾಟನೆ ನೆರವೇರಿಸಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಎಲ್ಲಿ ದೇವರ ಅನುಗ್ರಹವಿದೆಯೋ ಅಲ್ಲಿ ಉತ್ತಮ ಬೆಳೆ ಮತ್ತು ಬೆಲೆ ಎರಡೂ ಇರುತ್ತದೆ. ಸಮಾಜದಲ್ಲಿ ಸದ್ಗುಣಗಳನ್ನು ಹೊಂದಿದ ವ್ಯಕ್ತಿಗಳು ಮಾತ್ರ ಸಮಾಜದ ಮನ್ನಣೆ ಪಡೆಯಲು ಸಾಧ್ಯ. ಮನುಷ್ಯ ಪ್ರಾಮಾಣಿಕತೆ ಮತ್ತು ಅರ್ಹತೆಯ ದುಡಿಮೆಯಿಂದ ಸಂಪಾದನೆ ಮಾಡಬೇಕು. ಸಮಾಜದಲ್ಲಿ ಅಧರ್ಮದ ಕಾರ್ಯ ನಡೆಯಬಾರದು. ಅದು ನಮ್ಮನ್ನು ದುರಂತಕ್ಕೆ ತಳ್ಳುತ್ತದೆ. ಇವತ್ತು ನಮ್ಮ ಸಹಕಾರಿ ಸಂಸ್ಥೆಗಳು ಧರ್ಮದ ಬಗ್ಗೆ ಶ್ರದ್ಧೆ ಇಟ್ಟುಕೊಂಡು ಮುನ್ನಡೆಯುತ್ತಿದೆ. ಉತ್ತಮ ಕಾರ್ಯದ ಮೂಲಕ ಸಂಘ ಸಂಸ್ಥೆಗಳು ಜನತೆಗೆ ಉತ್ತಮ ಸಹಾಯಹಸ್ತ ನೀಡಲಿ. ಸಂಸ್ಥೆ ಬೆಳೆಯುತ್ತ ಸಮಾಜವನ್ನೂ ಬೆಳೆಸಲಿ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಚಿವ ಶಿವರಾಮ ಹೆಬ್ಬಾರ್ ಮಾತನಾಡಿ, ಸಹಕಾರಿ ಕ್ಷೇತ್ರ ಈ ಜಿಲ್ಲೆಯ ಹೆಬ್ಬಾಗಿಲು. ರೈತರ ಜೀವನಾಡಿಯಾಗಿ ಕೆಲಸ ಮಾಡುತ್ತಿದೆ. ಸಹಕಾರಿ ಕ್ಷೇತ್ರದ ಮೂಲಕವೇ ರೈತರ ಹಲವು ಅಪೇಕ್ಷೆಗಳು ಈಡೇರುತ್ತಿದೆ. ಹಾಗಾಗಿ ಸಹಕಾರಿ ಕ್ಷೇತ್ರವನ್ನು ಗಟ್ಟಿಗೊಳಿಸಿಕೊಂಡು ಹೋಗುವ ಹೊಣೆ ನಮ್ಮ ಮೇಲಿದೆ ಎಂದರು.

ಟಿಎಸ್ಎಸ್ ಕಾರ್ಯಾಧ್ಯಕ್ಷ ರಾಮಕೃಷ್ಣ ಹೆಗಡೆ ಕಡವೆ, ಟಿ.ಎಂ.ಎಸ್ ಅಧ್ಯಕ್ಷ ನಾರಾಯಣ ಭಟ್ಟ ಅಗ್ಗಾಶಿಕುಂಬ್ರಿ ಸಾಂದರ್ಭಿಕವಾಗಿ ಮಾತನಾಡಿದರು. ಪ.ಪಂ. ಉಪಾಧ್ಯಕ್ಷೆ ಶ್ಯಾಮಲಿ ಪಾಠಣಕರ್, ಸಹಕಾರಿ ಸಂಘದ ಉಪಾಧ್ಯಕ್ಷ ಟಿ.ಆರ್.ಹೆಗಡೆ, ತಿಮ್ಮಣ್ಣ ಘಟ್ಟಿ, ಸುಬ್ರಾಯ ಭಟ್, ದಾನ್ಯಾನಕೊಪ್ಪ ಅಪ್ಪು ಆಚಾರಿ, ಮಹಾಬಲೇಶ್ವರ ಗುಮ್ಮಾನಿ, ಸುಜಾತಾ ಹೆಬ್ಬಾರ್, ಸಂತೋಷ ನಾಯ್ಕ, ಮುಖ್ಯಕಾರ್ಯನಿರ್ವಾಹಕ ಎಂ.ಎಸ್.ಹೆಗಡೆ ಉಪಸ್ಥಿತರಿದ್ದರು. ವೇದಮೂರ್ತಿ ಗಣಪತಿ ಭಟ್ಟ ಕೋಲಿಬೇಣ ಸಂಗಡಿಗರು ವೇದಘೋಷಗೈದರು. ಸಹಕಾರಿ ಸಂಘದ ಅಧ್ಯಕ್ಷ ನಾಗರಾಜ ಕವಡಿಕೇರಿ ಸ್ವಾಗತಿಸಿ ಪ್ರಾಸ್ತಾವಿಕಗೈದರು. ಜಿ.ಎನ್.ಭಟ್ಟ ಕಾರ್ಯಕ್ರಮ ನಿರ್ವಹಿಸಿದರು. ನಿರ್ದೇಶಕ ಆರ್.ಎಸ್.ಭಟ್ಟ ವಂದಿಸಿದರು.